# ತಾರಸಿ ಮೇಲೆ ಡ್ರ್ಯಾಗನ್ ಲೀಲೆ



ತಾರಸಿ ಮೇಲೆ ಡ್ರ್ಯಾಗನ್ ಹಣ್ಣುಗಳ ಗಿಡಗಳು

**ಪೇಟೆಯಲ್ಲಿ ಬೇಡಿಕೆ ಹೊಂದಿರುವ ಹಣ್ಣುಗಳಲ್ಲಿ ಡ್ರ್ಯಾಗನ್ ಹಣ್ಣುಗಳೂ ಸೇರಿವೆ. ಈ ವಾಣಿಜ್ಯ ಹಣ್ಣನ್ನು ತಾರಸಿಯ ಮೇಲೂ ಬೆಳೆಯಲು ಸಾಧ್ಯ ಎನ್ನುವುದನ್ನು ಶನಿವಾರಸಂತೆಯ ಯುವ ಕೃಷಿಕ ಸಾಧಿಸಿ ತೋರಿಸಿದ್ದಾರೆ.**

■ ಶ.ಗ. ನಯನತಾರಾ

ತಾರಸಿ ಮೇಲೆ ಹೂದೋಟವನ್ನು ಬೆಳೆಸುವವರು, ಹಣ್ಣು–ತರಕಾರಿ ಬೆಳೆಯುವವರು ಸಾಕಷ್ಟು ಮಂದಿಯಿದ್ದಾರೆ. ಟೆರೇಸ್ ಗಾರ್ಡನಿಂಗ್ ಈಗ ಜನಪ್ರಿಯ ಹವ್ಯಾಸವಾಗಿದೆ. ಆದರೆ, ಶನಿವಾರಸಂತೆಯ ಯುವ ಕೃಷಿಕರೊಬ್ಬರು ತಾರಸಿ ಮೇಲೆ ಡ್ರ್ಯಾಗನ್ ಹಣ್ಣು ಬೆಳೆದಿದ್ದಾರೆ. ಅದರಲ್ಲೂ ಸಾವಯವ ಕೃಷಿ ಮೂಲಕ.

ಶನಿವಾರಸಂತೆಯ ಬೈಪಾಸ್ ರಸ್ತೆಯಲ್ಲಿರುವ ಸಂತೆಮಾರುಕಟ್ಟೆ ಮುಂಭಾಗದಲ್ಲಿ ನಂದಕುಮಾರ್ ಅವರ ಮನೆಯಿದೆ. ಅವರ ಮನೆಯ ತಾರಸಿಯೀಗ ಕೃಷಿ ಉತ್ಸಾಹಿಗಳ ಪಾಲಿಗೆ ಆಕರ್ಷಣೆಯ ಕೇಂದ್ರ. ಮೂರು ಅಂತಸ್ತುಗಳ ಕಟ್ಟಡದ ಮೇಲ್ಭಾಗದಲ್ಲಿ ಅವರು ಡ್ರ್ಯಾಗನ್ ಹಣ್ಣು ಬೆಳೆದು ಹೊಸ ಕೃಷಿ ಪ್ರಯೋಗದಲ್ಲಿ ಯಶಸ್ವಿಯಾಗಿದ್ದಾರೆ.

ಒಂದೂವರೆ ವರ್ಷದ ಹಿಂದೆ ನಂದಕುಮಾರ್ ತಮ್ಮ ತಾರಸಿಯ ಮೇಲೆ 40 ಡ್ರ್ಯಾಗನ್ ಗಿಡಗಳನ್ನು ನೆಟ್ಟರು. ಈಗ ಫಲ ಕೊಡುವ ಸಮಯ. ಈಗಾಗಲೇ 20 ಕೆ.ಜಿ. ಹಣ್ಣುಗಳನ್ನು ಅವರು ಪಡೆದಿದ್ದಾರೆ. ಇನ್ನೂ 40 ಕೆ.ಜಿ. ಹಣ್ಣು ಕೊಯ್ಯುವ ನಿರೀಕ್ಷೆಯಲ್ಲಿದ್ದಾರೆ.

ನಂದಕುಮಾರ್ ಅವರಿಗೆ ಡ್ರ್ಯಾಗನ್ ಹಣ್ಣಿನ ಕೃಷಿಯ ಬಗ್ಗೆ ಆಸಕ್ತಿ ಮೂಡಿಸಿದ್ದು ಅವರ ಸ್ನೇಹಿತ ದುಂಡಳ್ಳಿ ಗ್ರಾಮದ ಕಿರಣ್. ಅವರ



ತಾರಸಿಯಲ್ಲಿ ಡ್ರ್ಯಾಗನ್ ಬೆಳೆದ ನಂದಕುಮಾರ್

ಮನೆಗೆ ಭೇಟಿ ನೀಡಿದಾಗ ಅಲ್ಲಿ ಬೆಳೆದಿದ್ದ ಒಂದು ಡ್ರ್ಯಾಗನ್ ಹಣ್ಣಿನ ಗಿಡ ನೋಡಿ ನಂದಕುಮಾರ್ ಆಕರ್ಷಿತರಾದರು. ಡ್ರ್ಯಾಗನ್ ಕೃಷಿಯ ಬಗ್ಗೆ ಆಸಕ್ತಿ ಮೂಡಿ, ಬೆಂಗಳೂರಿನ ಯಲಹಂಕದ ಶ್ರೀನಿವಾಸ ರೆಡ್ಡಿ ಅವರ ಫಾರ್ಮ್ ಹೌಸ್‌ಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು. ನಂತರ ತಮ್ಮ ಮನೆಯ ತಾರಸಿ ಮೇಲೆ ಸಾವಯವ ಕೃಷಿ ಪದ್ಧತಿಯಲ್ಲಿ ವಿಯೆಟ್ನಾಂ ಪಿಂಕ್ ತಳಿಯ ಡ್ರ್ಯಾಗನ್ ಹಣ್ಣಿನ ಕೃಷಿ ಆರಂಭಿಸಿದರು.

ಮೊದಲಿಗೆ 200 ಲೀಟರ್ ನೀರು ಸಂಗ್ರಹ ಸಾಮರ್ಥ್ಯದ ಪ್ಲಾಸ್ಟಿಕ್ ತೊಟ್ಟಿಯನ್ನು ತಂದು, ಮಧ್ಯ ಭಾಗಕ್ಕೆ ತುಂಡು ಮಾಡಿ, 2 ಭಾಗಗಳಾಗಿ ಕತ್ತರಿಸಿ, ಅದರಲ್ಲಿ ಕೆಂಪು ಮಣ್ಣು ತುಂಬಿಸಿ, ಸಾವಯವ ಗೊಬ್ಬರ ಸೇರಿಸಿದರು. ತೊಟ್ಟಿಯೊಂದಕ್ಕೆ ತಲಾ 4 ಗಿಡಗಳನ್ನು ನಾಟಿ ಮಾಡಿದರು. ಒಟ್ಟು 10 ತೊಟ್ಟಿಗಳಲ್ಲಿ 40 ಗಿಡಗಳು! ಈ ಪರಿಶ್ರಮದ ಫಲ ಒಂದೂವರೆ ವರ್ಷದಲ್ಲೇ ಕಾಣಿಸಿಕೊಂಡಿದೆ; ಗಿಡಗಳಲ್ಲಿ ಹೂವು ಅರಳಿ ಫಸಲು ಕಾಣಿಸಿದೆ. ಈ ತಾರಸಿ ತೋಟದ ಪ್ರತಿ ಹಣ್ಣು 500–700 ಗ್ರಾಂ ತೂಕವಿದೆ.

ಮುಂದಿನ ವರ್ಷ ಕೃಷಿ ಚಟುವಟಿಕೆ ವಿಸ್ತರಿಸಲು ಪಂಜಾಬ್‌ನ ಫಾರ್ಮ್‌ನಿಂದ 4 ದೇಶಗಳ ವಿವಿಧ ತಳಿಯ 100 ಸಸಿಗಳನ್ನು ನಂದಕುಮಾರ್ ಖರೀದಿಸಿದ್ದಾರೆ. ಆ ಸಸಿಗಳನ್ನು ಚಿಕ್ಕಚಿಕ್ಕ ಬುಟ್ಟಿಯಲ್ಲಿ ನಾಟಿ ಮಾಡಿ ಪೋಷಿಸುತ್ತಿದ್ದಾರೆ. 'ಡ್ರ್ಯಾಗನ್ ಹಣ್ಣಿನ ಕೃಷಿ ಲಾಭದಾಯಕ. ಹೆಚ್ಚಿನ ಬಿಸಿಲಿನಲ್ಲಿ ಈ ಗಿಡಗಳನ್ನು ಬೆಳೆಯಬೇಕು' ಎನ್ನುತ್ತಾರೆ. ನಂದಕುಮಾರ್ ಅವರ ಡ್ರ್ಯಾಗನ್ ಕೃಷಿಯ ಯಶಸ್ಸು ಸುತ್ತಮುತ್ತಲ ಕೃಷಿ ಉತ್ಸಾಹಿಗಳನ್ನು ಸೆಳೆದಿದೆ. ಕೆಲವರು ತಮ್ಮ ಮನೆಗಳ ತಾರಸಿಗಳ ಮೇಲೂ ಡ್ರ್ಯಾಗನ್ ಗಿಡಗಳನ್ನು ಬೆಳೆಸಲು ಆರಂಭಿಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in